1. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಯಾವ ಮಂತ್ರಾಲಯದಡಿಯಲ್ಲಿ ಬರುವುದು?
    1. ಪರಿಸರ ಮಂತ್ರಾಲಯ
    2. ಪ್ರವಾಸೋದ್ಯಮ ಮಂತ್ರಾಲಯ
    3. **ಸಂಸ್ಕೃತಿ ಮಂತ್ರಾಲಯ**
    4. ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯ

2. ಈ ಮುಂದಿನ ಹೇಳಿಕೆಗಳನ್ನು ಗಮನಿಸಿ
    1. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯವೇ ಜಿಲ್ಲೆಯ ಅತ್ಯುನ್ನತ ಕ್ರಿಮಿನಲ್ ನ್ಯಾಯಾಲಯವಾಗಿದೆ
    2. ರಾಜ್ಯಪಾಲರು ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಜೊತೆ ಪರಾಮರ್ಶೆ ನಡೆಸಿ ಜಿಲ್ಲಾ ನ್ಯಾಯಾಧೀಶರುಗಳನ್ನು ನೇಮಕ ಮಾಡುತ್ತಾರೆ
    3. ಜಿಲ್ಲಾ ನ್ಯಾಯಾಧೀಶರಾಗುವಂತಹ ವ್ಯಕ್ತಿ ಕನಿಷ್ಠ ಏಳು ವರ್ಷಗಳ ಕಾಲ ನ್ಯಾಯವಾದಿಯಾಗಿರಬೇಕು ಅಥವಾ ಕೇಂದ್ರ ಇಲ್ಲವೇ ರಾಜ್ಯ ನ್ಯಾಯಾಂಗ ಸೇವೆ ಸಲ್ಲಿಸಿರಬೇಕು
    4. ಸೆಷನ್ಸ್ ನ್ಯಾಯಾಧೀಶರು ಮರಣದಂಡನೆಯನ್ನು ವಿಧಿಸಿದಾಗ, ಅದನ್ನು ಕಾರ್ಯಾಚರಣೆಗೆ ತರುವ ಮುನ್ನ ಹೈಕೋರ್ಟ್ ಆ ನಿರ್ಣಯವನ್ನು ದೃಢೀಕರಿಸಬೇಕು

    ಈ ಹೇಳಿಕೆಗಳಲ್ಲಿ ಸರಿಯಾದುವನ್ನು ಗುರುತಿಸಿ:

    (1) 1, 2 ಮತ್ತು 3
    (2) 1, 2 ಮತ್ತು 4
    (3) 1, 3 ಮತ್ತು 4
    **(4) ಮೇಲಿನ ಎಲ್ಲವೂ**

3. ಲೋಕಸಭೆಗೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿ
    1. ಲೋಕಸಭಾಧ್ಯಕ್ಷರು ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಅಧಿಕಾರವನ್ನು ಹೊಂದಿದ್ದಾರೆ. ಆದರೆ ಮುಂದೂಡಿದ ನಂತರ ಸದನವನ್ನು ಕರೆಯುವ ಅಧಿಕಾರ ರಾಷ್ಟ್ರಪತಿಗಳಿಗೆ ಮಾತ್ರ ಇದೆ
    2. ಲೋಕಸಭೆಯ ಪ್ರಥಮ ಅಧಿವೇಶನ ಸೇರಿ 5 ವರ್ಷಗಳ ನಂತರ ವಿಶೇಷ ಸಂದರ್ಭಗಳಲ್ಲಿ ಅದರ ಅವಧಿಯನ್ನು ಹೆಚ್ಚಿಸದಿದ್ದರೆ, ರಾಷ್ಟ್ರಪತಿಗಳು ಸದನವನ್ನು ವಿಸರ್ಜನೆಗೊಳಿಸದಿದ್ದರೂ ತಾನೇ ತಾನಾಗಿ ಅದು ವಿಸರ್ಜನೆಗೊಳ್ಳುತ್ತದೆ

3. ಲೋಕಸಭೆಯ ವಿಸರ್ಜನೆಯ ನಂತರವೂ ಮುಂದಿನ ಸದನದ ಪ್ರಥಮ ಅಧಿವೇಶನದವರೆಗೆ ಲೋಕಸಭಾಧ್ಯಕ್ಷರು ಅವರ ಸ್ಥಾನದಲ್ಲಿ ಮುಂದುವರೆಯುತ್ತಾರೆ

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿ:

(1) 1 ಮತ್ತು 3

(2) 1 ಮತ್ತು 2

(3) 2 ಮತ್ತು 3

**(4) ಮೇಲಿನ ಎಲ್ಲವೂ**

4. ಭಾರತೀಯ ಚುನಾವಣಾ ಆಯೋಗದ ಕುರಿತಾದ ಈ ಮುಂದಿನ ಅಂಶಗಳನ್ನು ಗಮನಿಸಿ:

1. ಇದು ಸ್ವತಂತ್ರ ಮತ್ತು ನಿಷ್ಪಕ್ಷಪಾತಿ ಚುನಾವಣೆ ಮೇಲ್ವಿಚಾರಣೆ ಹಾಗೂ ನಿರ್ದೇಶನ ಮಾಡುತ್ತದೆ
2. ಸಂಸತ್ತು, ರಾಜ್ಯ ಶಾಸನಸಭೆ, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ - ಈ ಎಲ್ಲಾ ಚುನಾವಣೆಗಳಿಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸುತ್ತದೆ
3. ರಾಜಕೀಯ ಪಕ್ಷಗಳಿಗೆ ಮಾನ್ಯತೆ ಕೊಡುವುದು; ರಾಜಕೀಯ ಪಕ್ಷಗಳಿಗೆ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ವ್ಯಕ್ತಿಗಳಿಗೆ ಚುನಾವಣಾ ಚಿಹ್ನೆಯನ್ನು ನೀಡುತ್ತದೆ
4. ಚುನಾವಣಾ ವಾದವಿವಾದಗಳ ವಿಚಾರವಾಗಿ ಅಂತಿಮ ನಿರ್ಣಯ ಕೈಗೊಳ್ಳುವುದು

ಇವುಗಳಲ್ಲಿ ಚುನಾವಣಾ ಆಯೋಗದ ಕಾರ್ಯಗಳು ಯಾವುವು?

(1) 2, 3 ಮತ್ತು 4

**(2) 1, 2 ಮತ್ತು 3**

(3) 1, 3 ಮತ್ತು 4

(4) ಮೇಲಿನ ಎಲ್ಲವೂ

5. ಈ ಮುಂದಿನ ಹೇಳಿಕೆಗಳನ್ನು ಗಮನಿಸಿ

1. ಸುಟ್ಟ ಸುಣ್ಣವನ್ನು ಗಾಜಿನ ಉತ್ಪಾದನೆಯಲ್ಲಿ ಬಳಸಲಾಗುತ್ತದೆ
2. ಅಡುಗೆ ಸೋಡಾವನ್ನು ಅಗ್ನಿಶಾಮಕಗಳಲ್ಲಿ ಬಳಸಲಾಗುತ್ತದೆ
3. ಜಿಪ್ಸಮ್ ಅನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ ನ ಉತ್ಪಾದನೆಯಲ್ಲಿ ಬಳಸಲಾಗುತ್ತದೆ

ಈ ಹೇಳಿಕೆಗಳಲ್ಲಿ ಯಾವುದು ಸರಿ?

(1) 1 ಮತ್ತು 3

(2) 1 ಮತ್ತು 2

(3) 2 ಮತ್ತು 3

**(4) ಮೇಲಿನ ಎಲ್ಲವೂ**

6. ಭಾರತೀಯ ಸಂಸತ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಸರಿಯಾದ ಹೇಳಿಕೆ ಅಲ್ಲ

1. ವಿನಿಯೋಗ ಮಸೂದೆಯನ್ನು ಕಾನೂನಾಗಿ ಜಾರಿಗೆ ತರುವ ಮುನ್ನ ಸಂಸತ್ತಿನ ಎರಡೂ ಸದನಗಳಿಂದ ಒಪ್ಪಿಗೆ ದೊರೆತಿರಬೇಕು
2. ವಿನಿಯೋಗ ಮಸೂದೆಯನ್ವಯ ವಿನಿಯೋಜನೆಗೆ ಒಪ್ಪಿಗೆ ದೊರಕದ ಹೊರತು ಭಾರತದ ಸಂಚಿತ ನಿಧಿಯಿಂದ ಹಣವನ್ನು ತೆಗೆಯುವಂತಿಲ್ಲ
3. **ಹೊಸ ಕರಗಳನ್ನು ಪರಿಚಯಿಸಲು ಹಣಕಾಸು ಮಸೂದೆಯ ಅಗತ್ಯವಿದೆ, ಈಗಾಗಲೇ ಜಾರಿಯಲ್ಲಿರುವ ಕರಗಳ ದರಗಳಲ್ಲಿ ಬದಲಾವಣೆ ಮಾಡಲು ಯಾವುದೇ ಮಸೂದೆ ಅಥವಾ ಕಾಯ್ದೆಯ ಅಗತ್ಯವಿಲ್ಲ**
4. ಅಧ್ಯಕ್ಷರ ಶಿಫಾರಸ್ಸು ಇಲ್ಲದೆ ಯಾವುದೇ ಧನ ಮಸೂದೆಯನ್ನು ಸದನದಲ್ಲಿ ಮಂಡಿಸುವಂತಿಲ್ಲ

7. ಪಟ್ಟಿ I ರಲ್ಲಿ ಕೊಟ್ಟಿರುವ ಸಮುದ್ರಗಳನ್ನು ಪಟ್ಟಿ II ರಲ್ಲಿ ನೀಡಿರುವ ಯಾವ ದೇಶಕ್ಕೆ ಸಂಬಂಧಿಸಿದೆ ಎಂಬುದನ್ನು ಹೊಂದಿಸಿ ಬರೆಯಿರಿ.

| ಪಟ್ಟಿ I | ಪಟ್ಟಿ II |
|---|---|
| A. ಕಪ್ಪು ಸಮುದ್ರ | 1. ಬಲ್ಗೇರಿಯಾ |
| B. ಕೆಂಪು ಸಮುದ್ರ | 2. ಚೀನಾ |
| C. ಹಳದಿ ಸಮುದ್ರ | 3. ಏರಿಟ್ರಿಯಾ |
| D. ಕ್ಯಾಸ್ಪಿಯನ್ ಸಮುದ್ರ | 4. ಕಝುಕಿಸ್ತಾನ |

ಉತ್ತರಗಳು:-

**(1) A-1, B-3, C-2, D-4**

(2) A-4, B-3, C-1, D-2

(3) A-1, B-2, C-3, D-4

(4) A-4, B-1, C-2, D-3

8. “14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಯಾವುದೇ ಕಾರ್ಖಾನೆ ಅಥವಾ ಗಣಿ, ಇಲ್ಲವೆ ಬೇರೆ ಯಾವುದೇ ಅಪಾಯಕಾರಿ ಉದ್ಯೋಗಕ್ಕೆ ಹಚ್ಚುವಂತಿಲ್ಲ” ಎಂದು ಭಾರತೀಯ ಸಂವಿಧಾನದ ಎಷ್ಟನೇ ಅನುಚ್ಛೇದ ಸೂಚಿಸುತ್ತದೆ

1. ಅನುಚ್ಛೇದ 19
2. ಅನುಚ್ಛೇದ 8
3. **ಅನುಚ್ಛೇದ 24**
4. ಅನುಚ್ಛೇದ 9

9. ಮಾರುಕಟ್ಟೆಯಲ್ಲಿ ಮಾರಲಾಗುವ ಸ್ಟಾಂಡರ್ಡ್ 18 ಕ್ಯಾರಟ್ ಚಿನ್ನ ಹೊಂದಿರುವುದು

1. **75% ಭಾಗ ಚಿನ್ನ ಮತ್ತು 25% ಭಾಗ ಇತರೆ ಲೋಹಗಳು**
2. 91.6% ಭಾಗ ಚಿನ್ನ ಮತ್ತು 8.4% ಭಾಗ ಇತರೆ ಲೋಹಗಳು
3. 80% ಭಾಗ ಚಿನ್ನ ಮತ್ತು 20% ಭಾಗ ಇತರೆ ಲೋಹಗಳು
4. 70% ಭಾಗ ಚಿನ್ನ ಮತ್ತು 30% ಭಾಗ ಇತರೆ ಲೋಹಗಳು

(ಸ್ಟಾಂಡರ್ಡ್ 18 ಕ್ಯಾರಟ್ ಚಿನ್ನ ಎಂದರೆ 18 ಭಾಗ ಚಿನ್ನ ಮತ್ತು 6 ಭಾಗ ಇತರೆ ಲೋಹಗಳು (18+6=24), 916 ಹಾಲ್ ಮಾರ್ಕ್ ಚಿನ್ನದಲ್ಲಿ 22 ಭಾಗ ಚಿನ್ನ ಮತ್ತು 2 ಭಾಗ ಇತರೆ ಲೋಹಗಳು ಅಂದರೆ 91.6% ಚಿನ್ನ ಹೊಂದಿರುತ್ತದೆ)

10. ಈ ಕೆಳಗಿನ ಯಾವ ವಿಧದ ಸೂಕ್ಷ್ಮ ಜೀವಿಗಳನ್ನು ಕೈಗಾರಿಕೆಗಳಲ್ಲಿ ಬಹಳವಾಗಿ ಬಳಸಲಾಗುತ್ತದೆ

1. ಏಕಾಣು ಜೀವಿಗಳು
2. ಸೂಕ್ಷ್ಮ ಪಾಚಿಗಳು
3. ಶಿಲೀಂದ್ರಗಳು
4. **ಮೇಲಿನ ಎಲ್ಲವೂ**

11. ಅಕ್ಟೋಬರ್ 1959 ರಲ್ಲಿ ಭಾರತದಲ್ಲಿ ಪ್ರಥಮ ಬಾರಿಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಾವ ರಾಜ್ಯದಲ್ಲಿ ಜಾರಿಗೊಳಿಸಲಾಯಿತು

1. ಕರ್ನಾಟಕ
2. **ರಾಜಸ್ತಾನ**
3. ಕೇರಳ
4. ಮಹಾರಾಷ್ಟ್ರ

12. ಈ ಕೆಳಗಿನ ಜೋಡಿಗಳಲ್ಲಿ ಯಾವುದು/ವು ಸರಿಯಾಗಿ ಹೊಂದಿಕೆಯಾಗಿದೆ

1. ಮೃಚ್ಛಕಟಿಕ - ಶೂದ್ರಕ
2. ಬುದ್ಧಚರಿತ - ವಸುಬಂಧು
3. ಮುದ್ರಾರಾಕ್ಷಸ - ವಿಶಾಖದತ್ತ
4. ಹರ್ಷಚರಿತ - ಬಾಣಬಟ್ಟ

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

**(1) 1, 3 ಮತ್ತು 4**

(2) 1, 2 ಮತ್ತು 3

(3) 2, 3 ಮತ್ತು 4

(4) ಮೇಲಿನ ಎಲ್ಲವೂ

13. ಬ್ಯಾಂಕುಗಳು ತಮ್ಮ ನಗದು ಹಣ ಮತ್ತು ಒಟ್ಟು ಆಸ್ತಿಗಳ ನಡುವೆ ಹೊಂದಿರಲೇಬೇಕಾದ ಅನುಪಾತವನ್ನು ಈ ರೀತಿ ಕರೆಯುತ್ತಾರೆ.

1. ಶಾಸನೀಯ ಬ್ಯಾಂಕ್ ಅನುಪಾತ (Statutory Bank Ratio)
2. **ಶಾಸನೀಯ ದ್ರವ್ಯತ್ವ ಅನುಪಾತ (Statutory Liquid Ratio)**
3. ನಗದು ಮೀಸಲು ಅನುಪಾತ (Cash Reserve Ratio)
4. ಕೇಂದ್ರ ದ್ರವ್ಯತ್ವ ಮೀಸಲು (Central Liquid Reserve)

14. ಮನುಷ್ಯನ ಮೂತ್ರಪಿಂಡದಲ್ಲಿ ಉಂಟಾಗುವ ಹರಳುಗಳು (ಕಿಡ್ನಿ ಕಲ್ಲು) ಮುಖ್ಯವಾಗಿ ಈ ಕೆಳಗಿನ ಯಾವ ರಾಸಾಯನಿಕದ ಸಂಯುಕ್ತವಾಗಿದೆ

1. ಕ್ಯಾಲ್ಸಿಯಂ ಕಾರ್ಬೋನೆಟ್
2. ಯೂರಿಕ್ ಆಮ್ಲ
3. ಕ್ಯಾಲ್ಸಿಯಂ
4. **ಕ್ಯಾಲ್ಸಿಯಂ ಅಕ್ಸಲೇಟ್**

15. ಈ ಕೆಳಗೆ ಕೊಟ್ಟಿರುವ ಭಾಷೆಗಳಲ್ಲಿ ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳು ಯಾವುವು

1. ಇಂಗ್ಲೀಷ್
2. ಜಪಾನಿ
3. ಜರ್ಮನಿ
4. ಚೀನಿ
5. ಅರೇಬಿಕ್

ಉತ್ತರಗಳು:-

(1) 1, 3 ಮತ್ತು 5

(2) 1, 2 ಮತ್ತು 4

**(3) 1, 4 ಮತ್ತು 5**

(4) 3, 4 ಮತ್ತು 5

(ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳಾಗಿ ಇಂಗ್ಲೀಷ್, ಫ್ರೆಂಚ್, ಚೀನಿ, ರಷ್ಯನ್, ಅರೇಬಿಕ್ ಮತ್ತು ಸ್ಪ್ಯಾನಿಷ್ ಭಾಷೆಗಳನ್ನು ಅಂಗೀಕರಿಸಲಾಗಿದೆ)

16. ಭಾರತದ ಆರ್ಥಿಕ ಸಮೀಕ್ಷೆಯನ್ನು ಪ್ರತಿವರ್ಷವು ಅಧಿಕೃತವಾಗಿ ಪ್ರಕಟಿಸುವ ಸಂಸ್ಥೆ ಯಾವುದು?

**1. ಭಾರತ ಸರ್ಕಾರದ ಹಣಕಾಸು ಮಂತ್ರಾಲಯ**

2. ಭಾರತೀಯ ರಿಸರ್ವ್ ಬ್ಯಾಂಕ್

3. ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ

4. ಭಾರತದ ಯೋಜನಾ ಆಯೋಗ

17. ಸಾಮಾನ್ಯವಾಗಿ ಅಂತರಿಕ್ಷದಲ್ಲಿನ ಆಕಾಶಕಾಯಗಳ ನಡುವಿನ ದೂರವನ್ನು ಖಗೋಳ ಏಕಮಾನದ ಮೂಲಕ ಅಳೆಯುತ್ತೇವೆ. ಒಂದು ಖಗೋಳ ಏಕಮಾನವು (Astronomical Unit) ಇವುಗಳ ನಡುವಣ ಸರಾಸರಿ ದೂರವಾಗಿರುತ್ತದೆ

1. ಭೂಮಿ ಮತ್ತು ಚಂದ್ರ

2. ಸೂರ್ಯ ಮತ್ತು ಚಂದ್ರ

3. ಭೂಮಿ ಮತ್ತು ಆಕಾಶ

**4. ಭೂಮಿ ಮತ್ತು ಸೂರ್ಯ**

18. ಇತ್ತೀಚಿನ ದಿನಗಳಲ್ಲಿ ಭಾರತದ ರೂಪಾಯಿ ಮೌಲ್ಯ ಅಮೆರಿಕಾದ ಡಾಲರ್ ಎದುರು ಅಪಮೌಲ್ಯಗೊಳ್ಳುತ್ತಿದೆ, ಇದಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಣದ ಮೌಲ್ಯವನ್ನು (ಬೆಲೆಯನ್ನು) ಯಾರು ನಿರ್ಧರಿಸುತ್ತಾರೆ.

1. ವಿಶ್ವ ಬ್ಯಾಂಕ್
2. ಸರಕು/ಸೇವೆಗಳ ಬೇಡಿಕೆಯನ್ನು ಒದಗಿಸುವ ಸಂಬಂಧಿತ ದೇಶ
3. ಅಮೆರಿಕಾದ ಫೆಡರಲ್ ಬ್ಯಾಂಕ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್
4. ಸಂಬಂಧಿತ ದೇಶದ ಸರ್ಕಾರದ ಸ್ಥಿರತೆ

ಈ ಹೇಳಿಕೆಗಳಲ್ಲಿ ಯಾವುದು ಸರಿ

(1) 1 ಮತ್ತು 3

**(2) 2 ಮತ್ತು 4**

(3) 1 ಮತ್ತು 4

(4) ಮೇಲಿನ ಎಲ್ಲವೂ

19. ವಿದ್ಯುತ್ ಒದಗಿಸುವ ವ್ಯವಸ್ಥೆಯಲ್ಲಿ ಒಂದು ಫ್ಯೂಸ್ ಅನ್ನು ರಕ್ಷಣಾಯುಕ್ತಿಯಾಗಿ ಉಪಯೋಗಿಸುತ್ತಾರೆ. ಫ್ಯೂಸ್ ನ ಬಗ್ಗೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ

**1. ಅದಕ್ಕೆ ಅಲ್ಪ ದ್ರವೀಕರಣ ಬಿಂದು ಇರಬೇಕು**

2. ಅದನ್ನು ಮುಖ್ಯವಾಗಿ ಬೆಳ್ಳಿಯ ಮಿಶ್ರ ಲೋಹಗಳಿಂದ ಮಾಡಿರುತ್ತಾರೆ

3. ಅದಕ್ಕೆ ಅತೀ ಹೆಚ್ಚಿನ ರೋಧತೆ ಇರಬೇಕು

4. ಅದಕ್ಕೆ ಅತೀ ಹೆಚ್ಚಿನ ವಿದ್ಯುತ್ ಹೀರುವ ಶಕ್ತಿ ಇರಬೇಕು

20. ಒಬ್ಬ ಗಗನಯಾತ್ರಿ ಭೂಮಿಯಿಂದ ಆಕಾಶಕ್ಕೆ ಯಾತ್ರೆ ಕೈಗೊಂಡಾಗ ಈ ಕೆಳಗೆ ಕೊಟ್ಟಿರುವ ಯಾವ ವಾಯುಮಂಡಲದ ಪದರಗಳ ಮೂಲಕ ಅನುಕ್ರಮವಾಗಿ ಸಂಚಾರಿಸುತ್ತಾನೆ

**1. ಹವಾಗೋಳ, ಸ್ತರಗೋಳ, ಮಧ್ಯಗೋಳ, ಅಯಾನುಗೋಳ**

2. ಹವಾಗೋಳ, ಮಧ್ಯಗೋಳ, ಸ್ತರಗೋಳ, ಅಯಾನುಗೋಳ

3. ಸ್ತರಗೋಳ, ಮಧ್ಯಗೋಳ, ಹವಾಗೋಳ, ಅಯಾನುಗೋಳ

4. ಸ್ತರಗೋಳ, ಹವಾಗೋಳ, ಅಯಾನುಗೋಳ, ಮಧ್ಯಗೋಳ

21. ಸಾಮಾನ್ಯವಾಗಿ ಮನೆಗಳಲ್ಲಿ ಬಳಸುವ ಟಂಗ್ ಸ್ಟನ್ ಹೊಂದಿರುವ (ಬುರುಡೆ ಬಲ್ಬ್) ವಿದ್ಯುತ್ ದೀಪಗಳು ಫ್ಲೋರಸೆಂಟ್ ದೀಪಗಳಿಗಿಂತ ಕಡಿಮೆ ಜೀವಾವಧಿಯನ್ನು ಹೊಂದಿರಲು ಕಾರಣವೇನೆಂದರೆ

1. ಟಂಗ್ ಸ್ಟನ್ ತಂತಿಯ ಎಳೆಯಲ್ಲಿ (ಫಿಲಮೆಂಟ್ ವೈರ್ ನಲ್ಲಿ) ಏಕರೂಪತೆ ಇರುವುದಿಲ್ಲ
2. ಬಲ್ಬ್ ನ ಒಳಗಡೆ ಸಂಪೂರ್ಣ ನಿರ್ವಾತ ಮಾಡಲು ಸಾಧ್ಯವಿಲ್ಲ
3. ಟಂಗ್ ಸ್ಟನ್ ಹಿಡಿದಿರುವ ತಂತಿಗಳು ಅಧಿಕ ತಾಪಮಾನದಲ್ಲಿ ಕರಗಿ ಹೋಗುತ್ತದೆ

ಮೇಲ್ಕಂಡ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ:-

(1) 1 ಮತ್ತು 2

(2) 1 ಮತ್ತು 3

(3) 2 ಮತ್ತು 3

**(4) ಮೇಲಿನ ಎಲ್ಲವೂ**

22. ನೇತ್ರದಾನಕ್ಕೆ ಸಂಬಂಧಿಸಿದಂತೆ, ಕಣ್ಣುಗಳನ್ನು ವ್ಯಕ್ತಿಯು ಮೃತಪಟ್ಟ 4 ರಿಂದ 6 ಗಂಟೆಗಳೊಳಗಾಗಿ ದಾನ ಮಾಡಬೇಕಾಗುತ್ತದೆ. ನೇತ್ರದಾನದ ಸಂದರ್ಭದಲ್ಲಿ ಕಣ್ಣಿನ ಈ ಕೆಳಕಂಡ ಯಾವ ಭಾಗವನ್ನು ಸಂರಕ್ಷಿಸಿಡುತ್ತಾರೆ.

1. **ಪಾರದರ್ಶಕ ಪಟಲ (ಕಾರ್ನಿಯಾ)**
2. ಕಣ್ಣು ಗುಡ್ಡೆಯ ಸುತ್ತಲಿರುವ ವೃತ್ತಾಕಾರದ ಪೊರೆ (ಐರಿಸ್)
3. ಮಸೂರ (ಲೆನ್ಸ್)
4. ಅಕ್ಷಿ ಪಟಲ (ರೆಟಿನಾ)

23. ಯೂರೋಪಿನ ಒಕ್ಕೂಟಕ್ಕೆ ಸಂಬಂಧಿಸಿದಂತೆ (European Union) ಈ ಹೇಳಿಕೆಗಳನ್ನು ಗಮನಿಸಿ

1. ಯೂರೋಪಿನ ಒಕ್ಕೂಟದಲ್ಲಿ ಒಟ್ಟು 27 ಸದಸ್ಯ ರಾಷ್ಟ್ರಗಳಿವೆ
2. ಯೂರೋಪಿನ ಒಕ್ಕೂಟದ ರಾಷ್ಟ್ರಗಳ ಪೌರರು ದ್ವಿಪೌರತ್ವವನ್ನು ಹೊಂದಿರುತ್ತಾರೆ
3. ಸ್ವಿಟ್ಜರ್ ಲ್ಯಾಂಡ್ ಯೂರೋಪಿನ ಒಕ್ಕೂಟದ ಸದಸ್ಯ ರಾಷ್ಟ್ರವಾಗಿದೆ
4. 1999 ರಲ್ಲಿ ಯೂರೋ ವಲಯ ಅಸ್ತಿತ್ವಕ್ಕೆ ಬಂತು

ಈ ಹೇಳಿಕೆಗಳಲ್ಲಿ ಸರಿಯಾದವು ಯಾವುವು

(1) 1, 2 ಮತ್ತು 3

(2) 2, 3 ಮತ್ತು 4

**(3) 1, 2 ಮತ್ತು 4**

(4) ಮೇಲಿನ ಎಲ್ಲವೂ

24. ಭಾರತದಲ್ಲಿ ಬ್ರಿಟನ್ನಿನ ಸಂವಿಧಾನಾತ್ಮಕ ಪ್ರಯೋಗಗಳಲ್ಲಿ ಅತ್ಯಂತ ಅಲ್ಪಾವಧಿಯದ್ದೆಂದರೆ

1. 1861 ರ ಭಾರತೀಯ ಕೌನ್ಸಿಲ್ ಗಳ ಕಾಯಿದೆ
2. 1892 ರ ಭಾರತೀಯ ಕೌನ್ಸಿಲ್ ಗಳ ಕಾಯಿದೆ
3. **1909 ರ ಭಾರತೀಯ ಕೌನ್ಸಿಲ್ ಗಳ ಕಾಯಿದೆ**
4. 1919 ರ ಭಾರತೀಯ ಕೌನ್ಸಿಲ್ ಗಳ ಕಾಯಿದೆ

25. ಟೆನ್ನಿಸ್ ನಲ್ಲಿ ಒಬ್ಬ ಆಟಗಾರನು ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಗಳಿಸಲು ಈ ಕೆಳಗಿನ ಯಾವ ಪಂದ್ಯಾವಳಿಗಳಲ್ಲಿ ವಿಜಯಿಯಾಗಬೇಕಾಗುತ್ತದೆ

1. ಆಸ್ಟ್ರೇಲಿಯನ್ ಓಪನ್
2. ಫ್ರೆಂಚ್ ಓಪನ್
3. ಜಪಾನ್ ಓಪನ್
4. ವಿಂಬಲ್ಡನ್ ಓಪನ್
5. ಯು.ಎಸ್.ಓಪನ್
6. ಡೇವಿಸ್ ಕಪ್ ಓಪನ್

ಸರಿಯಾದ ಉತ್ತರ:-

(1) 1, 2, 5 ಮತ್ತು 6

**(2) 1, 2, 4 ಮತ್ತು 5**

(3) 1, 2, 3, 4 ಮತ್ತು 5

(4) ಮೇಲಿನ ಎಲ್ಲವೂ

(ಟೆನ್ನಿಸ್ ನಲ್ಲಿ ಆಟಗಾರನೊಬ್ಬ "ಗ್ರ್ಯಾಂಡ್ ಸ್ಲಾಮ್ " ಪ್ರಶಸ್ತಿಗಳಿಸಲು ಒಂದೇ ವರ್ಷದಲ್ಲಿ ನಾಲ್ಕು ಪ್ರಮುಖ ಪಂದ್ಯಾವಳಿಗಳಾದ ಆಸ್ಟ್ರೇಲಿಯನ್ ಓಪನ್, ಫ್ರೆಂಚ್ ಓಪನ್, ವಿಂಬಲ್ಡನ್ ಓಪನ್ ಮತ್ತು ಯು.ಎಸ್.ಓಪನ್ ಪಂದ್ಯಗಳಲ್ಲಿ ಚಾಂಪಿಯನ್ ಪಟ್ಟ ಪಡೆಯಬೇಕಾಗುತ್ತದೆ.)

26. ಭಾರತದಲ್ಲಿ ವಾಸವಿರುವ  ಈ ಕೆಳಗಿನ ಯಾರಿಗೆ ಸಂವಿಧಾನದಲ್ಲಿ ಮೀಸಲಾತಿ ಮತ್ತು ಇತರೆ ಸೌಲಭ್ಯ ನೀಡಲು ಮಾನ್ಯ ಮಾಡಿದೆ.

1. ಧಾರ್ಮಿಕ ಅಲ್ಪಸಂಖ್ಯಾತರನ್ನು ಮಾತ್ರ
2. ಭಾಷಾ ಅಲ್ಪಸಂಖ್ಯಾತರನ್ನು ಮಾತ್ರ
3. **ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರನ್ನು**
4. ಭಾಷಾ ಮತ್ತು ಜನಾಂಗೀಯ ಅಲ್ಪಸಂಖ್ಯಾತರನ್ನು

27. ಪಟ್ಟಿ I ರಲ್ಲಿ ಕೊಟ್ಟಿರುವ ಹಾರ್ಮೋನ್ ಗಳನ್ನು ಪಟ್ಟಿ II ರಲ್ಲಿರುವ ಅದರ ಅಂಶಗಳೊಂದಿಗೆ ಹೊಂದಿಸಿ, ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

| ಪಟ್ಟಿ I | ಪಟ್ಟಿ II |
|---|---|
| A. ಅಡ್ರಿನಲಿನ್ | 1. ವಾಸನಾಯುಕ್ತ ಪ್ರಜ್ಞಾವಾಹಿಯ ಮೂಲಕ ಸಂಗಾತಿಗಳನ್ನು ಆಕರ್ಷಿಸುವುದು |
| B. ಈಸ್ಟ್ರೋಜನ್ | 2. ಕೋಪ, ಭಯ, ಅಪಾಯ |
| C. ಇನ್ಸುಲಿನ್ | 3. ಸ್ತ್ರೀಯರು |
| D. ಫರ್ಮೋನ್ಸ್ | 4. ಗ್ಲೂಕೋಸ್ |

ಸಂಕೇತಗಳು:

**(1) A-2, B-3, C-4, D-1**

(2) A-4, B-3, C-1, D-2

(3) A-1, B-4, C-3, D-2

(4) A-3, B-1, C-2, D-4

28. ಭಾರತ ಸಂವಿಧಾನಕ್ಕೆ ತಿದ್ದುಪಡಿ ಕಾರ್ಯವಿಧಾನವನ್ನು ಇವರು ಆರಂಭಿಸಬಹುದಾಗಿದೆ

1. ರಾಷ್ಟ್ರಪತಿ
2. ಲೋಕಸಭೆ
3. ರಾಜ್ಯಸಭೆ
4. ರಾಜ್ಯ ಶಾಸಕಾಂಗಗಳು

ಈ ಮೇಲ್ಕಂಡ ಹೇಳಿಕೆಗಳಲ್ಲಿ ಯಾವುದು ಸರಿ

(1) 2 ಮಾತ್ರ

(2) 1 ಮತ್ತು 2

(3) 1, 2 ಮತ್ತು 4

**(4) 2 ಮತ್ತು 3**

29. ಆದಾಯ ತೆರಿಗೆ ವಿಧಿಸುವಿಕೆ, ಸಂಗ್ರಹಣೆ ಮತ್ತು ಹಂಚಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ

1. **ಕೇಂದ್ರವು ಆದಾಯ ತೆರಿಗೆಯನ್ನು ವಿಧಿಸುತ್ತದೆ, ಸಂಗ್ರಹಿಸುತ್ತದೆ ಮತ್ತು ಬಂದ ವರಮಾನವನ್ನು ತನ್ನ ಮತ್ತು ರಾಜ್ಯಗಳ ನಡುವೆ ಹಂಚುತ್ತದೆ**
2. ಕೇಂದ್ರವು ಆದಾಯ ತೆರಿಗೆಯನ್ನು ವಿಧಿಸುತ್ತದೆ, ಸಂಗ್ರಹಿಸುತ್ತದೆ ಹಾಗೂ ಎಲ್ಲಾ ವರಮಾನವನ್ನು ತಾನೆ ಇಟ್ಟುಕೊಳ್ಳುತ್ತದೆ
3. ಕೇಂದ್ರವು ಆದಾಯ ತೆರಿಗೆಯನ್ನು ವಿಧಿಸುತ್ತದೆ ಮತ್ತು ವಸೂಲಿ ಮಾಡುತ್ತದೆ, ಆದರೆ ಬಂದ ಎಲ್ಲಾ ವರಮಾನವು ರಾಜ್ಯಗಳ ನಡುವೆ ಹಂಚಲ್ಪಡುತ್ತದೆ
4. ಆದಾಯ ತೆರಿಗೆಯ ಮೇಲೆ ವಿಧಿಸುವ ಸರ್ಚಾರ್ಜ್ ಮಾತ್ರ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾಗುತ್ತದೆ

30. ಭಾರತದಲ್ಲಿ ನೆಲೆಸಿರುವ ಯಾವುದೇ ಒಬ್ಬ ವಿದೇಶಿ ಪೌರನು ಭಾರತ ಸಂವಿಧಾನದಲ್ಲಿ ನೀಡಿರುವ ಯಾವ ಹಕ್ಕನ್ನು ಚಲಾಯಿಸುವಂತಿಲ್ಲ

1. **ವ್ಯಾಪಾರ ಮತ್ತು ವೃತ್ತಿ ಸ್ವಾತಂತ್ರ್ಯ ಹಕ್ಕು**
2. ಕಾನೂನಿನ ಮುಂದೆ ಸಮಾನತೆ ಹಕ್ಕು
3. ಪ್ರಾಣ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಹಕ್ಕು
4. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು